

## ನಿಮ್ಮ ಆದ್ಯತೆ ಹೀಗಿರಲಿ

- ಉದ್ದದ, ಭುಜ ತಾಕುವ ಕಿವಿಯೋಲೆಗಳು ನೋಡಲು ಆಕರ್ಷಕವಾಗಿದ್ದರೂ ಅವುಗಳನ್ನು ತುಂಬಾ ಜತನದಿಂದ ತೊಡಬೇಕಾಗುತ್ತದೆ. ಇಲ್ಲವಾದರೆ ಮುಜುಗರ ಅನುಭವಿಸುವ ಸಂದರ್ಭವೂ ಬರಬಹುದು.
- ಸ್ಟೇಟ್ಮೆಂಟ್ ಕಿವಿಯೋಲೆಗಳು ದೊಡ್ಡದಾಗಿಯೂ ಥಟ್ಟನೆ ಕಣ್ಸೆಳೆಯುವಂತಿರುತ್ತವೆ. ಹೀಗಾಗಿ ಬೇರೆ ಬೇರೆ ಬೋಲ್ಡ್ ಆದ ಆಭರಣ ತೊಡುವುದು ಬೇಡ. ಕಿವಿಯೋಲೆ, ಕತ್ತಿಗೆ ಸರ, ಬ್ರೇಸ್ಲೆಟ್‌ಗಳನ್ನು ಬಳಸುವುದಿದ್ದರೆ ಸಾಧ್ಯವಾದಷ್ಟು ಒಂದೇ ವಿನ್ಯಾಸಕ್ಕೆ ಒತ್ತು ನೀಡಿ.
- ಸರಳವೇ ಸುಂದರ. ಹೀಗಾಗಿ ಸ್ಟೇಟ್ಮೆಂಟ್ ಕಿವಿಯೋಲೆಗಳನ್ನು ಧರಿಸಿದಾಗ ಸಾಧ್ಯವಾದಷ್ಟು ನಿಮ್ಮ ದಿರಿಸು ಸರಳವಾಗಿರಲಿ. ಆಗ ನಿಮ್ಮ ಆಭರಣ ಎದ್ದು ಕಾಣುತ್ತದೆ.
- ಕಿವಿಯೋಲೆ ಯಾವತ್ತಿದ್ದರೂ ನಮ್ಮ ವ್ಯಕ್ತಿತ್ವ ಹಾಗೂ ಮೊಗಕ್ಕೆ ಒಪ್ಪುವಂತಿರಬೇಕು. ನಿಮ್ಮ ದಿರಿಸಿಗೆ ಹೊಂದುವ ಬಣ್ಣ ಇರಲಿ. ಕಿವಿಯೋಲೆಯ ಉದ್ದ, ಗಾತ್ರ ನಿಮಗೆ ಸರಿಹೊಂದುವಂತಿರಲಿ. ಭುಜ ತಾಕುವ ಕಿವಿಯೋಲೆ ಧರಿಸಿದಾಗ ಕೂದಲನ್ನು ಇಳಿಬಿಡುವುದು ಬೇಡ. ಆಫ್ ಶೋಲ್ಡರ್ ದಿರಿಸಿಗೆ ಇವು ಹೆಚ್ಚು ಒಪ್ಪುತ್ತವೆ.
- ಸಾಂಪ್ರದಾಯಿಕ ದಿರಿಸು ತೊಟ್ಟಾಗ ಕುಂದನ್, ಹರಳು, ಮಣಿಗಳಿಂದ ಮಾಡಿದ ಸಾಂಪ್ರದಾಯಿಕ ವಿನ್ಯಾಸದ ಸ್ಟೇಟ್ಮೆಂಟ್ ಕಿವಿಯೋಲೆಗಳು ಇರಲಿ

ಹಿರಿದಾದ ಕಿವಿಯೋಲೆಗಳಲ್ಲಿಯೂ ವಿನ್ಯಾಸ ವೈವಿಧ್ಯ ಸಾಕಷ್ಟಿವೆ. ಅದರಲ್ಲಿ ಶೋಲ್ಡರ್ ಗ್ರೇಸಿಂಗ್ ಸ್ಟೇಟ್ಮೆಂಟ್ ಕಿವಿಯೋಲೆಗಳು ಈ ವರ್ಷದಲ್ಲಿ ಹೆಚ್ಚು ಜನಪ್ರಿಯತೆ ಗಳಿಸುತ್ತಿದೆ. ಟ್ರೆಂಡ್‌ಗಳೊಂದಿಗೆ ಹೆಜ್ಜೆ ಇಡುವವರ ಸಂಗ್ರಹದಲ್ಲಿ ಇವುಗಳೂ ಸ್ಥಾನ ಪಡೆದುಕೊಂಡಿವೆ. ವರ್ಷದಿಂದ ವರ್ಷಕ್ಕೆ ಉದ್ದ ಹೆಚ್ಚಿಸಿಕೊಳ್ಳುತ್ತಿರುವ ಇವು ಸದ್ಯ ಕಿವಿಯಿಂದ ಭುಜದವರೆಗೂ ಚಾಚಿಕೊಂಡು ಹೊಸತನ ನೀಡುತ್ತಿವೆ. ಕಿವಿಯನ್ನು ಸಿಂಗರಿಸಿ ಕುತ್ತಿಗೆಯನ್ನು ಅಲಂಕರಿಸುತ್ತಾ ಭುಜಕ್ಕಿಳಿಯುವುದು ಇವುಗಳ ವಿಶೇಷ.

ಕೌತುಕ ಮೂಡಿಸುವಷ್ಟು ವಿನ್ಯಾಸದಲ್ಲಿ ಮಾರುಕಟ್ಟೆಗೆ ಲಗ್ಗೆ ಇಟ್ಟಿರುವ ಇವುಗಳು ಬಣ್ಣ ವೈವಿಧ್ಯದಲ್ಲಿಯೂ ಲಭ್ಯವಿವೆ. ದೀಪಿಕಾ ಪಡುಕೋಣೆ ತೊಟ್ಟಿದ್ದ ಹಸಿರು ಬಣ್ಣದ ಶೋಲ್ಡರ್ ಗ್ರೇಸಿಂಗ್ ಕಿವಿಯೋಲೆ ಹಾಗೂ ಪ್ರಿಯಾಂಕಾ ಚೋಪ್ರಾ ತೊಟ್ಟಿದ್ದ ಕಪ್ಪುಚುಕ್ಕಿನ ವಿನ್ಯಾಸದ ಕಿವಿಯೋಲೆ ಇತ್ತೀಚೆಗೆ ಹೆಚ್ಚು ಸದ್ದು ಮಾಡಿತ್ತು. ಉದ್ದ ಹಾಗೂ ಗಾತ್ರವನ್ನು ಮುಖ್ಯವಾಗಿರಿಸಿಕೊಂಡ ಈ ಕಿವಿಯೋಲೆ ವಿದೇಶಿ ಫ್ಯಾಷನ್ ಕ್ಷೇತ್ರದಲ್ಲಿ ಜೋರಾಗಿ ಸದ್ದು ಮಾಡುತ್ತಿವೆ. ರ್‍ಯಾಂಪ್ ಮೇಲೆ ಹೆಜ್ಜೆಯೂರುವ ರೂಪದರ್ಶಿಗಳು ತೊಡುವ



ಕಿವಿಯೋಲೆಗಳು ಒಂದಕ್ಕಿಂತ ಒಂದು ಉದ್ದ. ಸೊಂಟ ತಾಕುವಷ್ಟು ಉದ್ದದವುಗಳೂ ಇದ್ದವು.

ಮಾರುಕಟ್ಟೆಯಲ್ಲಿ ಸ್ಟೇಟ್ಮೆಂಟ್ ಕಿವಿಯೋಲೆಗಳ ಜನಪ್ರಿಯತೆ ಜೋರಾಗಿಯೇ ಇದೆ. ಜೊತೆಗೆ ಚಿನ್ನದ ಅಂಗಡಿಗಳಲ್ಲಿ ಕೂಡ ದೊಡ್ಡದಾದ ವಿಭಿನ್ನ ವಿನ್ಯಾಸದ ಕಿವಿಯೋಲೆಗಳನ್ನು ವಿನ್ಯಾಸಗೊಳಿಸಲಾಗುತ್ತಿದೆ. ಮಣಿಕರ್ಣಿಕಾ, ಬಾಹುಬಲಿ ಮುಂತಾದ ಸಿನಿಮಾಗಳಲ್ಲಿ ನಟಿಯರು ತೊಟ್ಟಂಥ ದೊಡ್ಡ ಕಿವಿಯೋಲೆಗಳು ಬಂಗಾರದಲ್ಲಿಯೂ ಸಿಗುತ್ತಿವೆ. ವಜ್ರ, ಬೆಳ್ಳಿ ಹಾಗೂ ಮೆಟಲ್‌ಗಳಲ್ಲಿಯೂ ಬೃಹತ್ ಗಾತ್ರದ ಕಿವಿಯೋಲೆಗಳು ಲಭ್ಯವಿವೆ.

ಗಾತ್ರ ದೊಡ್ಡದೆನಿಸಿದರೂ ಹೆಚ್ಚಿನವು ಹಗುರವಾದ ಆಭರಣಗಳೇ ಆಗಿವೆ. ಮೊಗಕ್ಕೆ ಚೆಂದದ ಲುಕ್ ನೀಡುವ ಇವು ಯಾವುದೇ ಶೈಲಿಯ ದಿರಿಸಿನೊಂದಿಗಾದರೂ ಹೊಂದಿಕೊಳ್ಳುತ್ತವೆ. ಸಮಕಾಲೀನ, ಸಾಂಪ್ರದಾಯಿಕ ಹಾಗೂ ಪಾಶ್ಚಾತ್ಯ ದಿರಿಸಿಗಳಲ್ಲಿಯೂ ಧರಿಸಬಹುದು. ಮದುವೆಯಂಥ ಸಾಂಪ್ರದಾಯಿಕ ಕಾರ್ಯಕ್ರಮಗಳಲ್ಲಿಯೂ ದೊಡ್ಡ ಕಿವಿಯೋಲೆ ಹೆಚ್ಚಿನವರ ಆಯ್ಕೆಯಾಗಿದೆ. ಸೀರೆಯಲ್ಲಿ ಕುಂದನ್ ವಿನ್ಯಾಸ ಇರುವ ಅಥವಾ ಹರಳುಗಳಿಂದ ಮಾಡಿದ ಕಿವಿಯೋಲೆ ಹೆಚ್ಚು ಹೋಲುತ್ತದೆ. ಸಿಲ್ಕ್ ಥ್ರೆಡ್‌ನಿಂದ ಮಾಡಿದ ಟಸೆಲ್ ವಿನ್ಯಾಸಗಳು ಆಧುನಿಕ ಉಡುಗೆಯೊಂದಿಗೆ ಚೆನ್ನಾಗಿ ಹೊಂದುಕೊಳ್ಳುತ್ತವೆ. ಸ್ಲೀವ್ಲೆಸ್, ಆಫ್ ಶೋಲ್ಡರ್ ದಿರಿಸಿಗಳಲ್ಲಿ ಸಮಕಾಲೀನ ವಿನ್ಯಾಸದ ಶೋಲ್ಡರ್ ಗ್ರೇಸಿಂಗ್ ಕಿವಿಯೋಲೆ ಒಪ್ಪುತ್ತದೆ. ಪಾರ್ಟಿಗಳಲ್ಲಿಯೂ ಕಿವಿಯೋಲೆ ಎಲ್ಲರೂ ನಿಮ್ಮತ್ತ ನೋಡುವಂತೆ ಮಾಡಬಲ್ಲವು.

ಅಂದ ಹಾಗೆ ಸ್ಟೇಟ್ಮೆಂಟ್ ಆಭರಣಗಳ ಪಟ್ಟಿಯೇ ಇದೆ. ಕಿವಿಯೋಲೆ, ಬ್ರೇಸ್ಲೆಟ್, ನೆಕ್ಲೆಸ್‌ಗಳು, ಕಾಲ್ಗೆಜ್ಜೆ, ಉಂಗುರಗಳೂ ಇವೆ. ಸಂದರ್ಭಕ್ಕೆ ತಕ್ಕಂತೆ ದಿರಿಸಿಗೆ ಒಪ್ಪುವಂತೆ ಜಾಣ್ಮೆಯಿಂದ ಧರಿಸಬೇಕಾಗುತ್ತದೆ.

## ಸ್ಟೇಟ್ಮೆಂಟ್ ಆಭರಣಗಳ ಇತಿಹಾಸ

ಸ್ಟೇಟ್ಮೆಂಟ್ ಆಭರಣಗಳು ಆಧುನಿಕ ಫ್ಯಾಷನ್ ಜಗತ್ತಿನ ಕೊಡುಗೆಯಲ್ಲ. ಫ್ಯಾಷನ್ ಮಾರುಕಟ್ಟೆಯಲ್ಲಿ ಬರುವ ಹೆಚ್ಚಿನ ವಿನ್ಯಾಸಗಳು ಹಳೆತರ ಹೊಸರ ರೂಪವಷ್ಟೇ. ಸ್ಟೇಟ್ಮೆಂಟ್ ಆಭರಣಗಳೂ ಅಷ್ಟೇ ಶತಮಾನಗಳ ಹಿಂದೆ ಜನಪ್ರಿಯತೆ ಗಳಿಸಿದ್ದವು. ಕಿವಿಯೋಲೆ ಅಷ್ಟೇ ಅಲ್ಲ, ನೆಕ್ಲೆಸ್, ಬೈತಲೆ ಬೊಟ್ಟು, ಬಳೆಗಳು, ಕಾಲ್ಗೆಜ್ಜೆ, ಉಂಗುರಗಳು ಎಲ್ಲವೂ ಇಂದಿನ ಸ್ಟೇಟ್ಮೆಂಟ್ ಆಭರಣಗಳ ರೂಪದಲ್ಲೇ ಇದ್ದವು.

ಆಧುನಿಕ ಶೈಲಿಯ ಅನೇಕ ಆಭರಣಗಳು ಈಜಿಪ್ಟ್, ರೋಮನ್ ಕಾಲದ ಆಭರಣದ ವಿನ್ಯಾಸವನ್ನೇ ಹೋಲುತ್ತವೆಯಂತೆ. 30 ಹಾಗೂ 40ರ ದಶಕಗಳಲ್ಲಿಯೂ ದೊಡ್ಡ ದೊಡ್ಡದಾದ ಆಭರಣಗಳನ್ನು ಜನರು ಧರಿಸುತ್ತಿದ್ದರು. ಕ್ರಮೇಣ ಕಾಲಕ್ಕೆ ತಕ್ಕಂತೆ ವಿವಿಧ ಗಾತ್ರದ ಆಭರಣಗಳನ್ನು ಫ್ಯಾಷನ್ ಪ್ರಿಯರು ಅಪ್ಪಿಕೊಂಡರು. ಇಂದು ಮತ್ತದೇ ಹಳೆಯ ವಿನ್ಯಾಸ ಆಧುನಿಕ ಬಣ್ಣ ಬಳಿದುಕೊಂಡು ಮಿಂಚುತ್ತಿವೆ.